ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಪುಕ್ಕ ಎಣಿಸಿಟ್ಟ ಪುಟ್ಟ ಬಾಲಕರು

ಬೆಳಗ್ಗೆ ಎದ್ದು ನೋಡುವಾಗ ಹಿಂದಿನ ರಾತ್ರಿ ಸೇರಿದ್ದ ಗುಂಪಿನ ಜನ ಮಾಯವಾಗಿದ್ದರು. ನನಗೆ ಆಕರ್ಷಕ ಎನಿಸಿದ್ದ ಆ ಮುಗುಳ್ನಗೆಯ ಹಿರಿಯ ವ್ಯಕ್ತಿ ಮಾತ್ರ ಉಳಿದಿದ್ದರು. ಕೂತು ಹಕ್ಕಿಗಳ ಪುಸ್ತಕದ ಪುಟ ತಿರುವುತ್ತಿದ್ದರು

ರಾತ್ರಿಯಾದರೆ ಇಲ್ಲಿನ ಕತ್ತಲೆ ಕೊಂಚ ಹೆದರಿಸುತ್ತೆ. ಈ ಸ್ಥಳಕ್ಕೆ ನಾನು ಸುಮಾರು ಸಲ ಬಂದಿದ್ದೇನೆ. ಇವತ್ತು ನನಗಿಂತ ಮೊದಲೇ ಬಂದಿದ್ದ ಒಂದು ಗುಂಪು ಇಲ್ಲಿ ಕೂತಿದೆ. ಇವರು ನನಗೆ ಪರಿಚಿತರಲ್ಲ. ಆದರೆ ನನ್ನಂತೆ ಹಕ್ಕಿಗಳ ಬೆನ್ನತ್ತಿ ಬಂದ ಸನ್ನಿಬಡಕರು ಎಂಬುದಂತೂ ಗೊತ್ತಾಗುತ್ತಿದೆ. ಕೂತಿದ್ದವರು ಹಲವು ಪ್ರಾಣಿ-ಪಕ್ಷಿಗಳ ವಿಶೇಷ ವಿಷಯಗಳ ಬಗ್ಗೆ ಮಾತಾಡುತ್ತಿದ್ದಾರೆ. ಇಲ್ಲೇ ಕೂತು ಇವರ ಮಾತಿಗೆ ಕಿವಿಯಾಗುವಾಸೆ ಇತ್ತು. ಆದರೆ ನಾನೊಬ್ಬ ಅನಾಮಿಕ. ಹೀಗಾಗಿ ಸಭ್ಯತೆ ಅಲ್ಲವೆಂದು ಕೊಂಚ ದೂರ ಹೋಗಿ ಕೂತಿದ್ದೇನೆ.

ನನ್ನ ಪ್ರಕಾರ ಇವರು ಸಾಮಾನ್ಯರಲ್ಲ. ಎಲ್ಲರೂ ನುರಿತ ಪಕ್ಷಿತಜ್ಞರು. ಜೀವ ಜಗತ್ತಿನ ಪಟಗಾರರು. ಪ್ರಕೃತಿ ಜೊತೆ ಕಲೆತು ಕೆಲಸ ಮಾಡಿದ ಅನುಭವಿಗಳು. ನನ್ನಿಷ್ಟದ ಫೋಟೊಗ್ರಫಿ ಕುರಿತು ಯಾರೇ ಹರಟಿದರೂ ಕದ್ದಾದರೂ ಕೇಳುವಾಸೆ ಆಗುತ್ತದೆ. ಅಸಲಿಗೆ ನಾನು ಉಳಿದಿದ್ದ ರೂಮಿನ ಮುಂದೆ ನಾಲ್ಕಾರು ಜನ ಕೂರುವಷ್ಟು ಜಾಗವಿತ್ತು. ಅಲ್ಲೇ ಈ ಪರಿಣಿತರು ದುಂಡಗೆ ಜಮಾಯಿಸಿದ್ದರು. ಇವರ ಬೆನ್ನಿಗೆ ತೋಟವೂ; ನಂತರ ಕುರುಚಲು ಕಾಡು ಶುರುವಾಗಿತ್ತು. ಮುಂದೆ ನಡೆದು ಹೋದರೆ ಹಳ್ಳದ ದಂಡೆಯ ಸಾಲು. ಅಲ್ಲಿಗೆ ಒಮ್ಮೊಮ್ಮೆ ಚಿರತೆ ಕೂಡ ಬರುವುದುಂಟು. ಅದರ ಹೆಜ್ಜೆ ಗುರುತು, ಕಕ್ಕ ಎಲ್ಲಾ ಹಲವು ಸಲ ಕಂಡಿದ್ದೇನೆ. ಗೇಟಿಗೆ ಮುಂದೆ ಕಟ್ಟಿದ ಟ್ರ್ಯಾಪ್ ಕ್ಯಾಮೆರಾದಲ್ಲಿ ಅದರ ಚಿತ್ರಗಳೂ ಬಂದಿವೆ.

ಪರಿಸರ ತಜ್ಞರು ಪಕ್ಷಿಗಳ ಅಳಿವು ಉಳಿವಿನ ಬಗ್ಗೆ ಸ್ವಾರಸ್ಯಕರವಾಗಿ ಚರ್ಚಿಸುತ್ತಿದ್ದಾರೆ. ಇವರಲ್ಲಿ ಕೊಂಚ ಹಿರಿಯ ವ್ಯಕ್ತಿಯೊಬ್ಬರು ಸಣ್ಣ ಬೆಳಕಿನ ಕಡೆ ಮುಖ ಮಾಡಿ ಕೂತು ಆಲಿಸುತ್ತಿದ್ದರು. ಅವರು ಹೆಚ್ಚೇನೂ ಮಾತಾಡುತ್ತಿರಲಿಲ್ಲ. ಅವರ ಕಣ್ಣುಗಳು ಮಾತ್ರ ಗುನುಗುತ್ತಿದ್ದವು. ನಗು, ಉತ್ಸಾಹ ತುಂಬಿಕೊಂಡಿದ್ದ ಅವರ ಮುಖದ ಗೆಲವು ಇಷ್ಟವಾಗುತ್ತಿತ್ತು. ಎಲ್ಲರೂ ಆವೇಶದಿಂದ ವಿಷಯಗಳನ್ನು ಮಂಡಿಸಿದರೆ ಇವರು ತುಂಬಿದ ಕೊಡದಂತೆ ತಣ್ಣಗೆ ಉತ್ತರಿಸುತ್ತಿದ್ದರು.

ಈ ದಿನ ಹಂಪಿಯ ಫೋಟೊಗ್ರಫಿ ಪಯಣದಲ್ಲಿ ಬಿಸಿಲ ಹೊಡೆತ ಆಯಾಸ ಕೊಟ್ಟಿತ್ತು. ಜೊತೆಗೆ ಸಂಜೆಯ ಹೊತ್ತಿಗೆ ಧುತ್ತನೆ ಕಾಲ ಬಳಿ ಸರಿದು ಹೋದ ಹಾವು ಅನಗತ್ಯ ಭಯ ಹುಟ್ಟಿಸಿತ್ತು. ಫಕ್ಕನೆ ಪಕ್ಕದಲ್ಲಿದ್ದವರು ಹಾವು ಎಂದು